ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Thursday, 25th March 1976/Chaitra 5, 1898 S.E.

The House met in the Assembly Chamber, Vidhana Soudha, at One of the Clock.

[MADAM SPEAKER (SMT K. S. NAGARATHNAMMA), in the Chair]

STARRED QUESTIONS
(to which oral answers were given)

ಮೊಂಡರು ಕೋಮಿನ ಜನಸಂಖ್ಯೆ

೮೦. ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಗ್ರಾಮಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಂಗಳನ್ನು ದಯವಿಟ್ಟು ತಿಳಿಸುವರೆ:—

(ಅ) ರಾಜ್ಯದಲ್ಲಿ ಮೊಂಡರು ಜಾತಿಯ ಜನಸಂಖ್ಯೆ ಎಷ್ಟು ಜಿಲ್ಲಾ ಮತ್ತು ತಾಲ್ಲೂಕು ಅಂಕಿ ಅಂಶಗಳ ಸಹಿತ);

(ಆ) ರಾಜ್ಯದಲ್ಲಿ ಮೊಂಡರು ಜಾತಿಯ ಸ್ಥಾನಮಾನವೇನು ಅವರನ್ನು ರಾಜ್ಯದಲ್ಲಿಯೂ ಪರಿಶಿಷ್ಟ ವರ್ಗ ಅಥವಾ ಪರಿಶಿಷ್ಟ ಜಾತಿ ಎಂ ಪಟ್ಟಿಯಲ್ಲಿ ಸೇರಿಸಲಾಗಿದೆಯೆ ;

(ಇ) ಈ ಹಿಂದುಳಿದ ಜಾತಿಯ ಏಳಿಗೆಯ ಬಗ್ಗೆ ಸರಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎನ್. ರಾಚಯ್ಯ (ಗ್ರಾಮಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು) —

(ಅ) ೧೯೫೧ನೇ ಇಸವಿಯಿಂದ ಜಾತಿವಾರು ಜನಗಣತಿಯನ್ನು ಮಾಡುತ್ತಿಲ್ಲ. ಆದ್ದರಿಂದ ಜನ ಸಂಖ್ಯೆ ಗೊತ್ತಿಲ್ಲ.

(ಆ) ಅವರನ್ನು ಪರಿಶಿಷ್ಟ ವರ್ಗ ಅಥವಾ ಜಾತಿಯಲ್ಲಿ ಸೇರಿಸಿಲ್ಲ.

(ಇ) ಸಮಾಜ ಕಲ್ಯಾಣ ಇಲಾಖೆಯಿಂದ ಈ ಜನಾಂಗದ ಏಳಿಗೆಗೆ ಯಾವ ವಿಶೇಷ ಯೋಜನೆಯನ್ನು ಕೈಗೊಂಡಿಲ್ಲ. ಆದರೆ ಇತರ ಹಿಂದುಳಿದ ಜಾತಿಯವರಿಗೆ ಸಿಗುವ ಸೌಲಭ್ಯಗಳು ಅವರಿಗೂ ಸಿಗುವವು.

ಶ್ರೀ ಚೌಡರೆಡ್ಡಿ.—ಸ್ವಾಮಿ ನನ್ನ 'ಬಿ' ಪ್ರಶ್ನೆಗೆ ಉತ್ತರವಾಗಿ ಪೆಡ್ಡೂಲ್ ಕಾಸ್ಟ್ ಮತ್ತು ಪೆಡ್ಡೂಲ್ ಟ್ರೈಬ್ಸ್ ಲಿಸ್ಟ್‌ನಲ್ಲಿ ಮಂದ ಕಮ್ಯುನಿಟಿಯವರನ್ನು ಸೇರಿಸಿಲ್ಲ ಎಂದು ಹೇಳುತ್ತೀರಿ. ೧೯೭೦ನೇ ಇಸವಿಯಲ್ಲಿ ಇವರನ್ನು ಪೆಡ್ಡೂಲ್ ಕಾಸ್ಟ್ ಲಿಸ್ಟಿಗೆ ಸೇರಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಇದರ ಬಗ್ಗೆ ದಯವಿಟ್ಟು ತಿಳಿಸುತ್ತೀರಾ ?

†ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರಿಗೆ ಗೊತ್ತಿದೆ, ಷೆಡ್ಯೂಲ್ ಕಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಪಟ್ಟಿಗೆ ಸೇರಬೇಕಾದರೆ ಅವರಿಗೆ ಒಂದು ಟ್ರೈಬಲ್ ಕ್ಯಾರೆಕ್ಟರ್ ಇರಬೇಕು. ಈ ಆಧಾರದ ಮೇಲೆ ಕೇಂದ್ರ ಸರ್ಕಾರದವರು ಆ ಪಟ್ಟಿಯಲ್ಲಿ ಸೇರಿಸುತ್ತಾರೆ. ಇವರು ಅಸ್ಪೃಶ್ಯರಾಗಿರಬೇಕು ಎನ್ನುವ ಆಧಾರದ ಮೇಲೆ ಇಂಡಿಯಾ ಸರ್ಕಾರದ ಅಧ್ಯಕ್ಷರು ಆ ಪಟ್ಟಿಯಲ್ಲಿ ಸೇರಿಸುತ್ತಾರೆ. ಸಾಮಾನ್ಯವಾಗಿ ಯಾರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಹಿಂದುಳಿದಿದ್ದಾರೋ ಅವರೆಲ್ಲ ಪಂಗಡದವರನ್ನೂ ಷೆಡ್ಯೂಲ್ ಕ್ಯಾಸ್ಟ್ ಪಟ್ಟಿಯಲ್ಲಿ ಸೇರಿಸಬೇಕು ಎಂದು ಅನೇಕ ಮನವಿಗಳು ಬರುತ್ತಿವೆ. ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ವರದಿ ಈ ಬಗ್ಗೆ ಪ್ರಿಂಟಿನಲ್ಲಿದೆ. ಪ್ರತಿಯೊಂದು ಜನಾಂಗವನ್ನೂ ಯಾವ ಯಾವ ಪಟ್ಟಿಯಲ್ಲಿರಬೇಕು ಎನ್ನುವುದನ್ನು ಅವರು ನಮೂದು ಮಾಡಿದ್ದಾರೆ. ಇದರ ಬಗ್ಗೆಯೂ ನಾವು ಸರಿಯಾಗಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಲಿಸ್ಟ್‌ನಲ್ಲಿ ಇರುವವರನ್ನು ಕೇಂದ್ರ ಸರ್ಕಾರದವರು ಡಿ-ಷೆಡ್ಯೂಲ್ ಮಾಡಬೇಕೆಂದು ಈಗಾಗಲೆ ಒಂದು ಬಿಲ್ಲನ್ನೂ ಸಹ ತರುವವರಿದ್ದಾರೆ. ಆದ್ದರಿಂದ ತಾವು ಕೇಳುವಂಥ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಚೌಡ ರೆಡ್ಡಿ.—೨೬-೭-೧೯೬೨ರಲ್ಲಿ ಕೆ. ಪಿ. ಸುರೇಂದ್ರನಾಥ್, ಅಂಡರ್ ಸೆಕ್ರಟರಿಯವರು ಇವರನ್ನು ಷೆಡ್ಯೂಲ್ ಕ್ಯಾಸ್ಟ್‌ನಲ್ಲಿ ಸೇರಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರದಿಂದ ಬರೆದಿದ್ದಾರೆ

ಶ್ರೀ ಎನ್. ರಾಚಯ್ಯ.—ಆ ರೀತಿ ಬರೆಯಬಹುದು. ಆದರೆ The criterion for the inclusion of any section or community or caste in the list of Scheduled castes shall be the observance of the stigma of untouchability. If this community were to suffer from the stigma of untouchability then only that question will arise. Any officer may write to the Central Government and they will examine the thing.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಷೆಡ್ಯೂಲ್ ಕ್ಯಾಸ್ಟ್‌ನಲ್ಲಿ ಸೇರಬೇಕಾದರೇ ಯಾವ ಅರ್ಹತೆಯನ್ನು ಹೊಂದಿರಬೇಕು ಎಂದು ಹೇಳಿದಿರಿ ? ಸರ್ಕಾರದವರೇ ಯಾವ ವರ್ಗದವರು ಯಾವ ಪಟ್ಟಿಗೆ ಸೇರುವುದಕ್ಕೆ ಅರ್ಹತೆ ಇದೆಯೆನ್ನುವುದನ್ನು ಗೊತ್ತು ಮಾಡಿ, ಅರ್ಹತೆ ಇದ್ದರೆ ಅವರನ್ನು ಪಟ್ಟಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಈಗಾಗಲೇ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ವರದಿ ಬಂದಿದೆ. ಜನಾಂಗದ ವಿಚಾರದಲ್ಲಿ ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆ ಎನ್ನುವುದನ್ನು ನೋಡುತ್ತೇವೆ. ಈಗಾಗಲೇ ಈಗ ಇರುವ ಪಟ್ಟಿಯಿಂದ ಕೆಲವರನ್ನು ತೆಗೆಯಬೇಕು ಎಂದು ಅನೇಕ ಎಂ.ಪಿ.ಗಳು ಹಾಗೂ ಶಾಸಕರೂ ತೀವ್ರವಾದಂಥ ಒಂದು ಮನವಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ನಮ್ಮ ಸರ್ಕಾರದಲ್ಲಿ ೧೯೬೦ರಲ್ಲಿ ನಾವು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಯಾರು ಟಚಬಲ್ಸ್ ಮತ್ತು ಸ್ಪೃಶ್ಯರು ಇವ್ವಾರೋ ಅವರನ್ನು ಹರಿಜನರ ಪಟ್ಟಿಯಿಂದ ತೆಗೆಯಬೇಕು ಎಂದೂ ಕೂಡ ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ಇಂಥ ಒಂದು ಮಾಸೂದೆ ಕೇಂದ್ರ ಸರ್ಕಾರದ ಮುಂದೆಯೂ ಇದೆ. ಈ ರೀತಿಯಾಗಿ ಸ್ಪೃಶ್ಯರನ್ನು ಹರಿಜನರ ಪಟ್ಟಿಯಿಂದ ತೆಗೆಯುತನಕ ಕಾಲದಲ್ಲಿ ಅಸ್ಪೃಶ್ಯರು ಇಲ್ಲವೋ ಅವರನ್ನು ಹರಿಜನರ ಪಟ್ಟಿಯಲ್ಲಿ ಸೇರಿಸತಕ್ಕ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಚೌಡರೆಡ್ಡಿ.—ಮಂದ ಕಮ್ಯುನಿಟಿಯವರನ್ನು ಷೆಡ್ಯೂಲ್ ಕ್ಯಾಸ್ಟ್‌ನವರು ಸಹ ಸೇರಿಸುವುದಿಲ್ಲ. ಇವರನ್ನು ಬ್ಯಾಕ್‌ವರ್ಡ್ ಕ್ಲಾಸ್‌ನವರೂ ಸೇರಿಸುವುದಿಲ್ಲ. ಆದ್ದರಿಂದ ಇವರನ್ನು ಸಧ್ಯದಲ್ಲಿ ನೆಮ್ಯಾಡಿಕ್ ಟ್ರೈಬ್ಸ್ ಎಂದು ಪರಿಗಣಿಸಿ ಅವರಿಗೆ ಕೊಡತಕ್ಕ ಸೌಲಭ್ಯ ಕೊಡಲಿಕ್ಕಾಗುತ್ತದೆಯೇ ?

ಶ್ರೀ ಎನ್. ರಾಚಯ್ಯ.—ಕ್ಯಾಸ್ಟ್ ಪ್ರಿಜ್ಯುಡೀಸ್ ಆಧಾರದ ಮೇಲೆ ಅನೇಕ ದೌರ್ಜನ್ಯಗಳು ದಬ್ಬಾಳಿಕೆಗಳು ಆಗುತ್ತಿರುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಕೆಲವು ಜನಾಂಗದವರು ಹರಿಜನರಿಗಿಂತಲೂ ಹಿಂದೆ ಬಿದ್ದಿದ್ದಾರೆ. ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ವರದಿಯಲ್ಲಿ ಎಕ್ಸಟ್ರೀಮ್ ಬ್ಯಾಕ್

† Indicate that remarks or speeches have not been revised by the member concerned.

ವರ್ಡ್ಸ್ ಯಾರು, ಬ್ಯಾಕ್‌ವರ್ಡ್ಸ್ ಯಾರು ಎಂದು ನಮೂದು ಮಾಡಿದ್ದಾರೆ. ವರದಿಯ ಆಧಾರದ ಮೇಲೆ ನಾವು ಇವರಿಗೆ ಅರ್ಹತೆ ಇದ್ದರೆ ಸೇರಿಸುತ್ತೇವೆ ವರದಿಯಲ್ಲಿ ಈ ಜನಾಂಗ ಇಲ್ಲದಿದ್ದರೆ ಮತ್ತೆ ನಾವು ಇನ್‌ವೆಸ್ಟಿಗೇಟ್ ಮಾಡಿಸಿ ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಚಿಂತಾಮಣಿ ತಾಲೂಕಿನಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ನಿರ್ಮಿಸುವುದು

ಳಿಳಿ. ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಗ್ರಾಮಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:—

(ಅ) ಚಿಂತಾಮಣಿ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಯ ಕಟ್ಟಡಗಳನ್ನು ಕಟ್ಟಲು ಸರ್ಕಾರ, ತಾಲ್ಲೂಕು ಅಭಿವೃದ್ಧಿ ಮಂಡಲಿ, ಗ್ರಾಮ ಪಂಚಾಯತಿ ಅಥವಾ ಜನ ಸಹಾಯದ ಸ್ಕೀಂನಿಂದ ಮಂಜೂರುಮಾಡಿ ಪ್ರಾರಂಭಿಸಲಾಗಿದ್ದ ಕಟ್ಟಡಗಳ ಸಂಖ್ಯೆ ಎಷ್ಟು;

(ಆ) ಇವುಗಳ ಪೈಕಿ ಎಷ್ಟು ಕಟ್ಟಡಗಳು ಪೂರ್ತಿಯಾಗಿವೆ;

(ಇ) ಯಾವ ಗ್ರಾಮಗಳಲ್ಲಿ ಸದರಿ ಸ್ಕೀಂ ಮಂಗಿದರೂ ಕೆಲವು ಕಟ್ಟಡಗಳು ಅಪೂರ್ಣವಾಗಿರಲು ಕಾರಣಗಳೇನು;

(ಈ) ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಎಸ್. ರಾಚಯ್ಯ (ಗ್ರಾಮಾಭಿವೃದ್ಧಿ ಹಾಗ ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ೯೨.

(ಆ) ೭೯.

(ಇ) (೧) ನಂದನವನ, (೨) ಬ್ಯಾಲಹಳ್ಳಿ, (೩) ಗುಂಡ್ಲಹಳ್ಳಿ, (೪) ಸೀಕಲ್, (೫) ಗುಟ್ಟಪಾಳ್ಯ, (೬) ಚಿಕ್ಕಪುರ, (೭) ಯರ್ರಯ್ಯಗಾರ ಹಳ್ಳಿ, (೮) ಕೂಡಿಗಲ್, (೯) ಇರಗಂಪಲ್ಲಿ, (೧೦) ಕಾಪಲ್ಲಿ, (೧೧) ಹೊಸಹಂಡ್ಯ, (೧೨) ಯಾಗವ ಕೋಟೆ ಮತ್ತು (೧೩) ಬಚ್ಚ್ವಾರಹಳ್ಳಿ. ಈ ಗ್ರಾಮಗಳಲ್ಲಿ ಸದರಿ ಸ್ಕೀಂ ಮುಗಿದರೂ ಶಾಲಾ ಕಟ್ಟಡಗಳು ಅಪೂರ್ಣವಾಗಿರುತ್ತವೆ.

ಸ್ಥಳೀಯ ಮುಖಂಡರ ಹೊರತು ಬೇರೆಯವರು ಕಂಟ್ರಾಕ್ಟನ್ನು ವಹಿಸಿಕೊಳ್ಳಲು ಬಾರದೆ ಇರುವುದರಿಂದ ಕೆಲಸಗಳು ಅಪೂರ್ಣವಾಗಿರುತ್ತವೆ.

(ಈ) ಆದಷ್ಟು ಬೇಗ ಕಟ್ಟಡಗಳ ಕೆಲಸಗಳನ್ನು ಪೂರ್ತಿಗೊಳಿಸಲು ಕಂಟ್ರಾಕ್ಟರುಗಳಿಗೆ ನೋಟೀಸ್ ಜಾರಿ ಮಾಡಲಾಗಿದೆ.

ಶ್ರೀ ಚೌಡರೆಡ್ಡಿ.—ಸ್ವಾಮಿ, ಇದರಲ್ಲಿ ೧೩ ಶಾಲಾ ಕಟ್ಟಡಗಳು ಪೂರ್ಣವಾಗಿಲ್ಲ. ಈ ಶಾಲಾ ಕಟ್ಟಡಗಳನ್ನು ಏನು ಕಟ್ಟಬೇಕೆಂದು ಒಂದು ಸ್ಕೀಂ ಹಾಕಿಕೊಂಡಿದ್ದೀರಿ ಇದು ಮುಗಿದಿದೆ ಎಂದು ಹೇಳುತ್ತೀರಿ. ಈಗ ಅಪೂರ್ಣವಾಗಿರುವ ಶಾಲಾಕಟ್ಟಡಗಳನ್ನು ಪೂರೈಸುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

† ಶ್ರೀ ಎಸ್. ರಾಚಯ್ಯ.—ಈ ೧೩ ಶಾಲಾಕಟ್ಟಡಗಳನ್ನೂ ತೀವ್ರವಾಗಿ ಮುಗಿಸುವ ಕ್ರಮವನ್ನು ತೆಗೆದುಕೊಂಡಿದ್ದೇವೆ. ನನಗೆ ಬಂದಿರುವ ವರದಿಯ ಪ್ರಕಾರ ೩೧ನೇ ಮಾರ್ಚ್ ೧೯೭೬ರಲ್ಲಿ ಈ ಕೆಲಸವನ್ನು ಮುಗಿಸುತ್ತೆವೆಂದು ಹೇಳಿದ್ದಾರೆ. ಇದು ಬೇರೆ ಯಾವುದಾದರೂ ಕಾರಣದಿಂದ ನಿಧಾನವಾದರೆ ಆದಷ್ಟು ತೀವ್ರವಾಗಿ ಈ ಶಾಲಾಕಟ್ಟಡಗಳನ್ನು ಪೂರೈಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಚೌಡರೆಡ್ಡಿ.—ಸ್ವಾಮಿ, ಈ ಕೆಲಸಗಳು ಮಂಜೂರಾದುದು ಯಾವಾಗ ಮತ್ತು ಮುಗಿಯುವುದು ಯಾವಾಗ ಹೇಳುತ್ತೀರಾ ಸ್ವಾಮಿ?